ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ:—ಇದು ಖಾಯಂ ಆದ ಹುದ್ದೆಯಲ್ಲ. ಇವರು ಈ ಕೆಲಸ ಮುಂಗಿಯುವವರೆಗೂ ಇರುತ್ತಾರೆ.

ಶ್ರೀ ಬಿ. ಎಂ. ಇದಿನಬ್ಬ:—ಶಿಕ್ಷಣ ಕ್ಷೇತ್ರ ಬಹಳ ಮಹತ್ವವಾದದ್ದು. ಆದ್ದರಿಂದ ಇಂಥಾ ಒಂದು ನೇಮಕವನ್ನು ಮಾಡಿಕೊಂಡಿರಿ ನಾವು ಭಾವಿಸುತ್ತೇವೆ. ಆದ್ದರಿಂದ ಅವರು ಕೊಟ್ಟಿರತಕ್ಕ ಸಲಹೆಗಳು ತೃಪ್ತಿಕರವಾಗಿವೆಯೇ? ಅವುಗಳನ್ನು ಕಾರ್ಯಗತ ಮಾಡುತ್ತೀರಾ?

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ:—ಹೌದು. ತೃಪ್ತಿಕರವಾಗಿವೆ. ಮತ್ತು ಅವು ಬಹಳ ಮಹತ್ವಪೂರಿತವಾಗಿವೆ. ಅವರ ಶಿಫಾರಸ್ಸುಗಳನ್ನು ಒಪ್ಪಿಕೊಂಡು ಕಾರ್ಯಪ್ರವೃತ್ತರಾಗಿ ಅನೇಕ ಶಿಫಾರಸ್ಸುಗಳನ್ನು ಜಾರಿಗೆ ತಂದಿದ್ದೇವೆ.

ಶ್ರೀ ಬಿ. ದೊಡ್ಡಬೋರೇಗೌಡ:—ಈ ಅಧಿಕಾರಿಗಳ ನೇಮಕದಿಂದ ಇಪ್ಪೊತ್ತಿನವರೆಗೂ ಸರ್ಕಾರಕ್ಕೆ ಒಟ್ಟು ಖರ್ಚು ಎಷ್ಟು ಬಂದಿದೆ?

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ:—ಒಟ್ಟಿನ ಮೊತ್ತದ ಬಗ್ಗೆ ಮಾಹಿತಿ ಇಲ್ಲ. ಆ ಅಧಿಕಾರಿಗಳಿಗೆ ಒಂದು ತಿಂಗಳಿಗೆ ಒಂದು ಸಾವಿರ ರೂಪಾಯಿಗಳನ್ನು ಕೊಡಲಾಗುತ್ತಿದೆ. ಮತ್ತು ಇದರ ಜೊತೆಗೆ ಅವರಿಗೆ ಒಬ್ಬರು ಸ್ಟೆನೋಗ್ರಾಫರ್ ಮತ್ತು ಒಬ್ಬ ನಾಲ್ಕನೆ ದರ್ಜೆ ಸರ್ವೆಂಟ್ ಅನ್ನು ಕೊಟ್ಟಿದೆ.

RURAL HOUSING SCHEME IN SHIMOGA DISTRICT

422. Sri Abdul Khuddus Anwar (Bhadravathi).— Will the Minister for Development be pleased to state :—

The total amount spent on Rural Housing Scheme in Shimoga District during 1967-68, 1868-69 (Talukwise figures may be furnished)?

Sri B. L. Gowda (Deputy Minister for Co-Operation):—

1967-68

Under L.I.C. Funds

		Rs.
1.	Hosanagar	50,900-00
2.	Sagar	9,600-00
	Total ...	60,500-00

1968-69

		Rs.
1	Hosanagar	4,260-00
2	Sagar	16,600-00
	Total ...	20,860-00
	Grand Total	1,34,360-00

1967-68

Under G.O.I. Funds

	Rs.
Shimoga	21,500-00
Sorab	1,000-00
Total ...	22,500-00

1968-69

	Rs.
Shimoga	26,600-00
Sorab	2,400-00
Honnali	1,500-00
Total ...	30,500-00

ಶ್ರೀ ಅಬ್ದುಲ್ ಖಿದ್ದೂಸ್:—ಸ್ವಾಮಿ, ಶಿವಮೊಗ್ಗ ಜಿಲ್ಲೆಯಲ್ಲಿನ ಗ್ರಾಮಾಂತರ ಗೃಹ ನಿರ್ಮಾಣ ಯೋಜನೆಗೆ ಸಂಬಂಧಪಟ್ಟ ಹಾಗೆ ಹಣವನ್ನು ಕೊಡುವುದರಲ್ಲಿ ತಾರತಮ್ಯ ಮಾಡುತ್ತಿದ್ದೀರಿ. ಹೊಸನಗರ, ಸಾಗರ, ಮಂಠಾಳ ಪ್ರದೇಶಗಳವರು ತಮ್ಮ ಹತ್ತಿರ ಬಂದು ಸಲಾಮುಹಾಕುತ್ತಾರೆ ಎಂದು ಅವರಿಗೆ ಜಾಸ್ತಿ ಹಣವನ್ನು ಕೊಡಂತ್ತಿದ್ದೀರಿ, ಚನ್ನಗಿರಿ ಮತ್ತು ಭದ್ರಾವತಿಯ ಎಂ.ಎಲ್.ಎ.ಗಳು ಬಂದು ನಮ್ಮನ್ನು ಹಣ ಕೊಡಿ ಎಂದು ಕೇಳುವುದಿಲ್ಲ ಅದಕ್ಕೋಸ್ಕರ ಅವರಿಗೆ ಕೊಡಬಾರದು ಎಂದು ಏನಾದರೂ ನಿರ್ಣಯ ಮಾಡಿದ್ದೀರಾ?

ಶ್ರೀ ಬಿ. ಎಲ್. ಗೌಡ:—ಆ ತರಹ ಏನೂ ಇಲ್ಲ. ರೂರಲ್ ಹೌಸಿಂಗ್ ಸ್ಕೀಮಿನಲ್ಲಿ ಈ ಯೋಜನೆಯನ್ನು ತೆಗೆದುಕೊಳ್ಳಬೇಕಾದರೆ ನಾವು ಯಾವುದಕ್ಕೆ ಪ್ರಯಾರಿಟಿಯನ್ನು ಕೊಡುತ್ತೇವೆ ಎಂದರೆ ಯಾವ ಯಾವ ಹಳ್ಳಿಗಳಲ್ಲಿ ವೀಕರ್ ಸೆಕ್ಷನ್ ಮತ್ತು ಬ್ಯಾಕ್‌ವರ್ಡ್ ಕ್ಲಾಸ್ ಜನಗಳು ಇರುತ್ತಾರೆಯೋ ಅಂಥಾ ಕಡೆ, ಕಂಜೆಸ್ಟೆಡ್ ವಿಲೇಜ್‌ಗಳು, ಸಬ್‌ಮರ್ಜ್‌ಡ್ ವಿಲೇಜ್‌ಗಳು ಇಂಥಾ ಕಡೆ ಮೊದಲು ಈ ಯೋಜನೆಗಳನ್ನು ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೇವೆ. ಈಗಾಗಲೇ ೩೭೪ ಹಳ್ಳಿಗಳಲ್ಲಿ ಕೇಂದ್ರ ಸರ್ಕಾರದವರ ಫಂಡಿನಿಂದ ಈ ಯೋಜನೆಗಳನ್ನು ತೆಗೆದುಕೊಂಡಿದ್ದೇವೆ. ಎಲ್.ಐ.ಸಿ. ಯವರ ಫಂಡಿನಿಂದ ೯೬ ಹಳ್ಳಿಗಳಲ್ಲಿ ಈ ಯೋಜನೆಗಳನ್ನು ತೆಗೆದುಕೊಂಡಿದ್ದೇವೆ. ಎಲ್ಲಾ ಕಡೆಗಳಲ್ಲಿಯೂ ಒಂದೇ ವರ್ಷದಲ್ಲಿ ತೆಗೆದುಕೊಳ್ಳುವುದಕ್ಕಾಗುವುದಿಲ್ಲ. ಮಾನ್ಯ ಸದಸ್ಯರು ತಮ್ಮ ಪ್ರಪೋಸಲ್ ಅನ್ನು ಕಳುಹಿಸಿದರೆ ಅದನ್ನು ಪರ್ಯಾಲೋಚನೆ ಮಾಡುತ್ತೇವೆ.

ಶ್ರೀ ಅಬ್ದುಲ್ ಖಿದ್ದೂಸ್ ಅನ್ವರ್:—ಭದ್ರಾವತಿ ಮತ್ತು ಚನ್ನಗಿರಿಯಿಂದ ಬಂದಿರುವ ಅಪ್ಲಿಕೇಷನ್‌ಗಳನ್ನು ಕನ್‌ಸಿಡರ್ ಮಾಡುತ್ತೀರಾ? ಮತ್ತು ಅವುಗಳಿಗೆ ಫಂಡ್ ಅಲಾಟ್ ಮಾಡುತ್ತೀರಾ?

ಶ್ರೀ ಬಿ. ಎಲ್. ಗೌಡ:—ಅದನ್ನು ಪರ್ಯಾಲೋಚನೆ ಮಾಡುತ್ತೇವೆ.

ಶ್ರೀ ಎಸ್. ಎಂ. ಗುರೆಡ್ಡಿ:—ಸ್ವಾಮಿ, ಈಗ ಹಣದ ಕೊರತೆ ಇರುವುದರಿಂದ ರೂರಲ್ ಹೌಸಿಂಗ್ ಯೋಜನೆಯನ್ನು ಹೌಸಿಂಗ್ ಬೋರ್ಡಿಗೆ ಮರ್ಜ್ ಮಾಡಿ ಎರಡು ಕೆಲಸಗಳನ್ನು ಹೌಸಿಂಗ್ ಬೋರ್ಡು ನಡೆಸಿಕೊಂಡು ಹೋಗುವಂತೆ ಮಾಡುವುದಕ್ಕಾಗುವುದಿಲ್ಲವೇ?

ಶ್ರೀ ಬಿ. ಎಲ್. ಗೌಡ:—ಅದನ್ನು ಯೋಚನೆ ಮಾಡುತ್ತೇವೆ.

SRI A. R. BADRINARAYAN:—On what basis are funds allotted for rural housing scheme?

SRI B. L. GOWDA:—Priority will be given to such of the villages which are submerged and where there are weaker sections and backward class people and where the villagers are living in congested places.

ಶ್ರೀ ಹಂಜಿಶಿವಣ್ಣ:—ಸ್ವಾಮಿ ಮನೆಗಳು ಮತ್ತು ಗುಡಿಸಲುಗಳು ಸುಟ್ಟು ಹೋದಾಗ ಈ ಯೋಜನೆಯನ್ನು ಅಳವಡಿಸುವುದಕ್ಕೆ ಪ್ರಯತ್ನ ಮಾಡುತ್ತೀರಾ? ಇದಕ್ಕೆ ಸಂಬಂಧಪಟ್ಟ ರೆಕಾರ್ಡ್ ಅನ್ನು ಬಿಲ್ಡಪ್ ಮಾಡಿ ಕಳುಹಿಸಿದರೆ ಅದನ್ನು ಮಂಜೂರು ಮಾಡಿಕೊಡುತ್ತೀರಾ?

ಶ್ರೀ ಬಿ. ಎಲ್. ಗೌಡ:—ಈ ಒಂದು ಕಂಡೀಷನ್‌ನಲ್ಲಿ ಇದು ಆಗುವುದಿಲ್ಲ.

ಶ್ರೀ ಎಂ. ಎಚ್. ಜಯಪ್ರಕಾಶ್‌ನಾರಾಯಣ್:—ಸ್ವಾಮಿ ಈಗ ತಾನೆ ಮಾನ್ಯ ಮಂತ್ರಿಗಳು ವೀಕರ್ ಸೆಕ್ಷನ್ ಇರುವ ಕಡೆ ಬ್ಯಾಕ್‌ವರ್ಡ್ ಕ್ಲಾಸ್ ಜನಗಳು ಇರುವ ಕಡೆ ಈ ಯೋಜನೆಯನ್ನು ತೆಗೆದುಕೊಳ್ಳುತ್ತೇವೆ, ಮಾನ್ಯತೆ ಕೊಡುತ್ತೇವೆ ಎಂದು ಹೇಳಿದರು ಈ ಗಾಗಲೇ ಈ ಯೋಜನೆಗೆ ಖರ್ಚಾಗಿರತಕ್ಕ ೧,೩೪,೩೬೦ ರೂಪಾಯಿಗಳು ಖರ್ಚಾಗಿದೆ. ಇದರಲ್ಲಿ ಪರಿಶಿಷ್ಟವರ್ಗದವರಿಗೆ ಎಷ್ಟು ಕೊಟ್ಟಿದ್ದೀರಿ?

ಶ್ರೀ ಬಿ. ಎಲ್. ಗೌಡ.—ಆ ವಿವರವನ್ನಲ್ಲಿ ಇಲ್ಲ.

SRI D. B. KALMANKAR.— Has it not come to the notice of the Government that the Housing Board has passed a resolution that the work of rural housing scheme may be entrusted to it?

MR. SPEAKER:— The supplementary is beyond the scope of the question. It pertains only to Shimoga district.

SRI ABDUL KHUDDUS ANWAR :—Will the Government kindly provide funds for Bhadravathi and Channagiri considering the pending applications ?

SRI B. L. GOWDA :—I have already said that application from Bhadravathi and Chennagiri will be considered sympathetically.

ಶ್ರೀ ಐ ಸೊವಂಶೇಖರಪ್ಪ :—ಎಷ್ಟು ಹಣ ಪೆಡ್ಡೂಲ್ ಕ್ಯಾಸ್ಟ್ಸ್ ಅಂಡ್ ಟ್ರೈಬ್ಸ್ ಸೊಸೈಟಿಗೆ ಕೊಟ್ಟಿದ್ದೀರಿ ?

ಶ್ರೀ ಬಿ. ಎಲ್. ಗೌಡ :— ಅದು ಈ ಪ್ರಶ್ನೆಯಲ್ಲಿ ಉದ್ಭವಿಸುವುದಿಲ್ಲ.

RAISING THE HEIGHT OF GAYATRI TANK IN HIRIYUR TALUK.

429 SRI B. GANGANNA (Kallambella)—

Will the Minister of State for Minor Irrigation be pleased to state:—

(*a*) the originally designed capacity of Gayathri Tank in Hiriyur Taluk ;

(*b*) the proposed achkat both wet and semi-dry (coming under Hiriyur and Sira Taluks as designed originally) ;

(*c*) the achkat that is now getting the benefit in Sira Taluk as well as Hiriyur taluk (both wet and semi-dry) ;

(*d*) whether there was any proposal previously raise the height of the Gayathri Tank by another 5 feet ;

(*e*) if so, the purpose with which it was thought of and the area which was likely to be benefied by it and whether the new achkat area is getting the benefit :

(*f*) the cost and the extent of benefit coming out of this ;